ದಿನಾಂಕಃ 24-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ವಿ.ಎಸ್ ಎನ್ ವಕೀಲರಿಂದಃ**

1. ನಾನು ಗೃಹಿಣಿಯಾಗಿರುತ್ತೇನೆ . ನಾನು ಕಾರವಾರದಲ್ಲಿ ವಾಸ ವಾಗಿರುತ್ತೇನೆ . ಹಾರವಾಡಾ ನನ್ನ ತಾಯಿಯ ಮನೆ . ದಾವಾಸ್ತಿಯ ಬಗ್ಗೆ ನನ್ನ ತಂದೆಯು ನನ್ನ ಬಳಿಯಲ್ಲಿ ಆಗಾಗ ಹೇಳುತ್ತಿದ್ದರು. ನಾನು ಈ ದಾವೆಯಲ್ಲಿ ಸಾಕ್ಷ್ಯವನ್ನು ನುಡಿಯಲು ನನ್ನ ತಂದೆಯ ಪರವಾಗಿ ಮಾತ್ರ ಬಂದಿದ್ದೇನೆ. ದಾವಾಸ್ತಿಯಲ್ಲಿ ಮೊದಲು ನಮ್ಮ ತಂದೆ ಇರುವಾಗ ಗದ್ದೆಯನ್ನು ಮಾಡುತ್ತಿದ್ದರು. ಈಗ ತಂದೆಯು ಮೃತ ಪಟ್ಟಿರುವುದರಿಂದ ಕೃಷಿ ಚಟುವಟಿಕೆ ಮಾಡುವುದಿಲ್ಲ . ಯೇಸೊ ಯಾನೆ ಯಶವಂತ ರಾಮಾ ಮೇಸ್ತಾ ಇವರು ನನ್ನ ತಂದೆಯ ಅಜ್ಜ ಆಗಿದ್ದರು . ದಾವಾಸ್ತಿಯ ಮೊದಲು ಯೋಸೋ ಯಾನೆ ಯಶವಂತ ರಾಮಾ ಮೇಸ್ತಾ ಎಂಬುವವರ ಹೆಸರಿನಲ್ಲಿ ಇತ್ತು ಎಂದರೆ ಅವರ ಹೆಸರಿಗೆ ದಾವಾಸ್ತಿ ಇರಲಿಲ್ಲ ಅವರ ಹೆಸರಿಗೆ ಒಂದೇ ಆಸ್ತಿ ಇತ್ತು . ದಾವಾಸ್ತಿ ನನ್ನ ಅಜ್ಜನ ಹೆಸರಿನಲ್ಲಿಃ ಇತ್ತು . ಯೇಸೋ ಯಾನೆ ಯಶವಂಶ ರಾಮಾ ಮೇಸ್ತಾ ರವರ ಹೆಸರಿನಲ್ಲಿ ಯಾವ ಆಸ್ತಿ ಇತ್ತು ಎಂದರೆ ಸರ್ವೆ 327 ಹಾರವಾಡದಲ್ಲಿ ಇತ್ತು. ದಾವಾಸ್ತಿಗಳನ್ನು ನಮ್ಮ ಅಜ್ಜ ಆವು ಯಶವಂತ ಆಚಾರಿ ರವರು ಖರೀದಿ ಮಾಡಿದ ಆಸ್ತಿಯಾಗಿರುತ್ತದೆ. ಸದ್ರಿ ನಮ್ಮ ಅಜ್ಜ ದಾವಾಸ್ತಿಗಳನ್ನು ಖರೀದಿ ಮಾಡಿದ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿರುತ್ತೇನೆ. ಸಾಕ್ಷಿ ದಾಖಲಾತಿಗಳನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ನಮ್ಮ ತಂದೆಯು ನಮ್ಮ ಅಜ್ಜ ಖರೀದಿ ಮಾಡಿದ ಆಸ್ತಿಗಳು ಎಂದು ನನ್ನ ಬಳಿಯಲ್ಲಿ ಹೇಳುತ್ತಾ ಇದ್ದರು ಆ ರೀತಿ ನಾನು ಹೇಳುತ್ತಿದ್ದೇನೆ ಎಂದು ನುಡಿಯುತ್ತಾರೆ . ಸದ್ರಿ ದಾಖಲಾತಿಗಳು ನ್ಯಾಯಾಲಯದ ಮುಂದೆ ಇರುತ್ತದೆಯಾ ಎಂದರೆ ವಕೀಲರು ದಾಖಲಾತಿಗಳನ್ನು ಸಾಕ್ಷಿದಾರರಿಗೆ ತೋರಿಸಲಾಗಿದ್ದು ಸಾಕ್ಷಿ ಸದ್ರಿ ದಾಖಲಾತಿಗಳನ್ನು ನೋಡಿ ಇಲ್ಲ ಎಂದು ನುಡಿಯುತ್ತಾರೆ . ನಿಮ್ಮ ಅಜ್ಜ ದಾವಾಸ್ತಿಗಳನ್ನು ಖರೀದಿ ಮಾಡಿದ ಬಗ್ಗೆ ಯಾವುದೆ ದಾಖಲಾತಿಗಳು ಇಲ್ಲ ಎಂದರೆ ಸರಿಯಲ್ಲ . ಆ ದಾಖಲಾತಿಗಳು ಇವೆ . ಅಂತಹ ಯಾವುದೇ ದಾಖಲಾತಿಗಳನ್ನು ನ್ಯಾಯಲಯದ ಮುಂದೆ ಹಾಜರು

ಪಡಿಸಿಲ್ಲ ಎಂದರೆ  ನಾನು ಕೋಟ್ಟಿರುತ್ತೇನೆ. ನೀವು ವಿಷಯವನ್ನು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸದ್ರಿ ಎಲ್ಲಾ ಆಸ್ತಿಗಳು ಯೇಸೋ ಯಾನೆ ಯಶವಂತ ರಾಮಾ ಮೇಸಾ ರವರ ಆಸ್ತಿಗಳು ಎಂದರೆ ಸರಿಯಲ್ಲ.

2. ಯೋಸೋ ಯಾನೆ ಯಶವಂತ ರಾಮಾ ಮೇಸ್ತಾ ರವರ ಹಿರಿಯ ಮಗನ ಹೆಸರು ರಾಮಾ ಯಶವಂತ ಆಚಾರಿ. ಯೋಸೋ ಯಾನೆ ಯಶವಂತ ರಾಮಾ ಮೇಸ್ತಾ ಯಾವಾಗ ತೀರಿಕೊಂಡಿರುತ್ತಾರೆ ಎಂದರೆ ನಾನು ಹುಟ್ಟುವ ಪೂರ್ವದಲಿಲ ತೀರಿಕೊಂಡಿರುತಾತರೆ ನಮ್ಮ ತಂದೆಯ ಅದರ ಬಗ್ಗೆ ಮಾಹಿತಿ ಕೊಟ್ಟಿರುತ್ತಾರೆ . ನಿಮ್ಮ ಮುತ್ತಜ್ಜ ಯೋಸೋ ಯಾನೆ ಯಶವಂತ ರಾಮಾ ಮೇಸ್ತಾ ರವರು 1913 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಹೌದು . ನಮ್ಮ ಮೂಲ ಮನೆ ಯಾವ ಸರ್ವೆ ನಂಬರದಲ್ಲಿ ಇರುತ್ತದೆ  ಎಂದು ನನಗೆ ನೆನಪಿಲ್ಲ.  ಎಲ್ಲಾ ಆಸ್ತಿಗಳು ಯೋಸೋ ಯಾನೆ ಯಶವಂತ ರಾಮಾ ಮೇಸ್ತಾ ರವರ ಹೆಸರಿನಲ್ಲಿ ಇರಲಿಲ್ಲ . ನನ್ನ ಅಜ್ಜನ ಹೆಸರಿನಲ್ಲಿ  ಇತ್ತು . ಅವರ ಹೆಸರು ಯಶವಂತ ಆಚಾರಿ. ನನ್ನ ಅಜ್ಜನಾದ ಯಶವಂತ ಆಚಾರಿ ಯವರು ಗ್ರಾಮ ಪಂಚಾಯತಿಯಲ್ಲಿ ಕೆಲಸ ಮಾಡುತ್ತಿದರು ಯಾವ ಹುದ್ದೆಯಲ್ಲಿ ಇದ್ದರು ಎಂದು ನನಗೆ ಗೊತ್ತಿಲ್ಲ. ರಾಮಾ ಆಚಾರಿ ಯವರು ಮನೆಯಲ್ಲಿ ಇರುತ್ತಿದ್ದರು . ಮನೆ ಕೆಲಸ ಮಾಡುತ್ತಿದ್ದರು ಹೊರಗಡೆ ಎಲ್ಲೂ ಕೆಲಸಕ್ಕೆ ಹೋಗುತ್ತಿರಲಿಲ್ಲ . ನಿಮಗೆ ನಿಮ್ಮ ಕುಟುಂಬದ ಬಗ್ಗೆ ಸರಿಯಾಗಿ ವೈಯಕ್ತಿಕ ಮಾಹಿತಿ  ಇಲ್ಲ ಎಂದರೆ ಸರಿಯಲ್ಲ . ರಾಮಾ ಆಚಾರಿ ಯವರು ಕೃಷಿ ಕೆಲಸ ಮಾಡುತ್ತಿದ್ದರು . ದಾವಾಸ್ತಿಯನ್ನು ರಾಮಾ ಆಚಾರಿ ಯವರು ನೋಡಿ ಕೊಳ್ಳುತ್ತಿದರು ಎಂದರೆ ನನ್ನ ಅಜ್ಜ ನೋಡಿಕೊಳ್ಳುತ್ತಿದ್ದರು.  ನಿಮ್ಮ ಅಜ್ಜ ಗ್ರಾಮ ಚಾವಡಿಯಲ್ಲಿ ಇರುತ್ತಿದರು.  ಹಾಗಾಗಿ ರಾಮಾ ಆಚಾರಿ ಯವರು ಕೃಷಿ ಚಟುವಟಿಕೆ ಮಾಡುತ್ತಿದ್ದರು ಎಂದರೆ  ನಮ್ಮ ಅಜ್ಜ ಮನೆಯಲ್ಲಿ ಇರುತ್ತಿದ್ದರು . ಉಳಿದವರೆಲ್ಲ ಹೊರಗಡೆ ಇರುತ್ತಿದ್ದರು .

3. ರಾಮಾ ಆಚಾರಿಯವರು ಮನೆಯಲ್ಲಿ ಇರುತ್ತಿರಲಿಲ್ಲ ಹೊರಗಡೆ ಇರುತ್ತಿದ್ದರು. ಕೃಷಿ ಚಟುವಟಿಕೆಯನ್ನೆಲ್ಲಾ  ನನ್ನ ಅಜ್ಜ ನೋಡಿಕೊಳ್ಳುತ್ತಿದ್ದರು. ಗಣಪತಿ ಯಶವಂತ ಆಚಾರಿ ಯವರು ಯಾವಾಗ ಮೃತ ಪಟ್ಟಿರುತ್ತಾರೆ  ಎಂದರೆ ನನಗೆ ನೆನಪಿಲ್ಲ.  ನಮ್ಮ  ತಂದೆಯ ತಂದೆ  ಮನೆಯಲ್ಲಿ ಒಬ್ಬರೆ ಇರುತ್ತಿದ್ದರು ಎಂದು ತೋರಿಸಲು ದಾಖಲಾತಿಯನ್ನು ಹಾಜರು ಪಡಿಸಿರುತ್ತೀರಾ ಎಂದರೆ ಹೌದು. ಅವರ ಹಳೆಯ ಮನೆಯಲ್ಲಿ ವಾಸ ಇದ್ದರು ಅದರ ನಂಬರ ನನಗೆ ನೆನಪಿಲ್ಲ.  ಸಾಧಾರಣವಾಗಿ ಆ ಮನೆಗೆ ಎಷ್ಟು

ವರ್ಷವಾಗಿರಬಹುದು ಎಂದರೆ ನಾವು ಸಣ್ಣವಾಗಿರುವಾಗಲೇ ಆ ಮನೆಯು ಮುರಿದು ಹೋಗಿರುತ್ತದೆ. ಎಷ್ಟು ಹಳೆಯದ್ದು ಎಂದು ಗೊತ್ತಿಲ್ಲ. ಆ ಮನೆಯ ಬಗ್ಗೆ ದಾಖಲಾತಿಯನ್ನು ನೀವು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಾ ಎಂದರೆ ಹೌದು . ನೀವು ಈ ವಿಷಯವನ್ನು ಸುಳ್ಳಿನಿಂದ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಯೋಸೊ ರವರಿಗೆ 4 ಜನ ಗಂಡು ಮಕ್ಕಳು . ಯೋಸೊ ಯಾನೆ ಯಶವಂತ ರಾಮಾ ಮೇಸ್ತಾ ರವರು ಇರುವಾಗ ಯಾವುದಾದರೂ ಆಸ್ತಿಗೆ ಸಂಬಂಧಿಸಿದಂತೆ ನೋಂದಾಯಿತ ಪತ್ರ ಪಾಲು ಮಾಡಿಕೊಂಡಿದ್ದು ಇರುತ್ತದೆಯಾ ಎಂದರೆ ಇಲ್ಲ. ಅದೇ ರೀತಿ ಯೆಸೊ ಯಾನೆ ಯಶವಂತ ರಾಮಾ ಮೇಸ್ತಾ ಅವರು ಜೀವಿತ ಕಾಲದಲ್ಲಿ ಈ ದಾವಾಸ್ತಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ದಾವೆ ಮಾಡಿದ್ದು ಇರುತ್ತದೆಯಾ ಎಂದರೆ ಸರಿಯಲ್ಲ.

( ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು .)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.